ಓ ಎಸ್ ನಂಬರ 182/2016
ಪಿ.ಡಬ್ಲ್ಯೂ 1

**ದಿನಾಂಕಃ 13.01.2026.**

**ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ಈ ದಾವೆಯಲ್ಲಿ 4 ನೇ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆ ಬದಲಿಗೆ ಅಫಿಡೆವಿಟನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ವಿಚಾರಗಳು ಸತ್ಯವಾಗಿರುತ್ತವೆ. ಓದಿ ನೋಡಿ ಸಹಿ ಮಾಡಿದ್ದೇನೆ.

ಸಿ ಟಿ ಎಸ್ ನಂಬರ 341 ಕ್ಕೆ ಸಂಬಂದಿಸಿದಂತೆ ರೂಲ್ಡ ಕಾರ್ಡನ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ 1 ಎಂದು, ಓ ಎಸ್ 187/2015 ರ ವಾದ ಪತ್ರದ ದೃಡೀಕೃತ ಪ್ರತಿ, ಸದರಿ ದಾವೆಯಲ್ಲಿ ಹಾಜರುಪಡಿಸಿದ್ದ ರಾಜಿ ಅರ್ಜಿದ ದೃಡೀಕೃತ ಪ್ರತಿ ಹಾಗೂ ರಾಜಿ ಅರ್ಜಿಯ ಡಿಕ್ರಿ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆ ಪಿ 2 ರಿಂದ 4 ಎಂದು , ಸಿಟಿ ಸರ್ವೇ ಬೈಲಹೊಂಗಲ ಇವರಿಗೆ ನೀಡಿದ ದಿ. 22.03.1996ರ ಪತ್ರ ಹಾಗೂ ಅದರೊಂದಿಗೆ ಲಗತ್ತಿಸಿ ನೀಡಿದ ಮರಣ ಸಮರ್ಥನೆ ಪತ್ರ ಉತ್ತರ ಜೀವಂತ ಸದಸ್ಯ ಪತ್ರ , ಜವಾಬು ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಶಾನೆ ಪಿ 5 ಎಂದು, ದಿ.19.01.2016 ರ ನೊಂದಾಯಿತ ಖರೀದಿ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ 6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

1ನೇ ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ